To. all DHOs & DSs

Office of the Commissioner
No.............
Dt. 13 MAY 2021
Health & FWS, B'lore

Guard File

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದಲ್ಲಿ ಕೋವಿಡ್-19 ನಿರ್ವಹಣೆಗಾಗಿ ಆಕ್ಸಿಜನ್ ಬೇಡಿಕೆಯ ಅಂದಾಜು ವರದಿಯನ್ನು ಸಲ್ಲಿಸಲು ಸಮಿತಿ ರಚಿಸುವ ಬಗ್ಗೆ

ಪ್ರಸ್ತಾವನೆ:

ರಾಜ್ಯದಲ್ಲಿ ಕೋವಿಡ್-19 ಸಾಂಕ್ರಾಮಿಕದ 2ನೇ ಅಲೆಯ ಪ್ರಸರಿಕೆಯ ವೇಗ ತೀವ್ರವಾಗಿದ್ದು, ಸೋಂಕಿತರು ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದು, ಆಮ್ಲಜನಕದ ವ್ಯವಸ್ಥೆಯಿರುವ ಬೆಡ್‌ಗಳ ಬೇಡಿಕೆ ಹೆಚ್ಚಾಗಿರುತ್ತದೆ. ರಾಜ್ಯದ ಎಲ್ಲಾ ಸರ್ಕಾರಿ (ಬಿ.ಬಿ.ಎಂ.ಪಿಯ ವ್ಯಾಪ್ತಿಯನ್ನೊಳಗೊಂಡಂತೆ) ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಆಮ್ಲಜನಕ ಎಷ್ಟು ಬೇಕಾಗುತ್ತದೆಯೆಂದು ಅಂದಾಜು / ಕಲ್ಪನೆ ಹಾಗೂ ಮುಂದಿನ ದಿನದಲ್ಲಿ ಈ ಸೋಂಕಿತರ ಪ್ರಮಾಣ ಹೆಚ್ಚಳವಾದಲ್ಲಿ ಅದರ ಬೇಡಿಕೆಯನ್ನು ಸಹ ಗಮನದಲ್ಲಿಟ್ಟುಕೊಂಡು ಪ್ರೊಜೆಕ್ಷನ್ ಬಿಬಿಎಂಪಿ ಹಾಗೂ ಪ್ರತಿ ಜಿಲ್ಲಾವಾರು ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳ ಬೇಡಿಕೆಯನ್ನು ಅಂದಾಜು ವರದಿಯ ಅವಶ್ಯಕತೆಯನ್ನು ಸರ್ಕಾರವು ಮನಗಂಡು ಅಂದಾಜು ವರದಿ ಸಲ್ಲಿಸಲು ಒಂದು ಸಮಿತಿಯನ್ನು ರಚಿಸಲು ತೀರ್ಮಾನಿಸಲಾಗಿದೆ.

ಅದರಂತೆ ಈ ಕೆಳಕಂಡಂತೆ ಸಮಿತಿ ರಚಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ಆಕುಕ. 94 ಸಿಜಿಎಂ.2021

ಬೆಂಗಳೂರು, ದಿನಾಂಕ: 06.05.2021

ಪ್ರಸ್ತಾವನೆಯನ್ನು ಪರಿಶೀಲಿಸಿ ರಾಜ್ಯದ ಎಲ್ಲಾ ಸರ್ಕಾರಿ (ಬಿ.ಬಿ.ಎಂ.ಪಿಯ ವ್ಯಾಪ್ತಿಯನ್ನೊಳಗೊಂಡಂತೆ) ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಉಸಿರಾಟದ ತೊಂದರೆಯಿಂದ ಬಳಲುತ್ತಿರುವ ಕೋವಿಡ್-19 ಸೋಂಕಿತರಿಗಾಗಿ ಅವಶ್ಯವಿರುವ ಆಮ್ಲಜನಕ ಪ್ರಮಾಣದ ಬಗ್ಗೆ ಅಂದಾಜು ಕಲ್ಪನೆ ಹಾಗೂ ಮುಂದಿನ ದಿನದಲ್ಲಿ ಈ ಸೋಂಕಿತರ ಪ್ರಮಾಣ ಹೆಚ್ಚಳವಾದಲ್ಲಿ ಅದರ ಬೇಡಿಕೆಯನ್ನು ಸಹ ಗಮನದಲ್ಲಿಟ್ಟುಕೊಂಡು ಬಿಬಿಎಂಪಿ ಹಾಗೂ ಪ್ರತಿ ಜಿಲ್ಲಾವಾರು ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳ ಬೇಡಿಕೆಯನ್ನು ಒಳಗೊಂಡಂತೆ ಅಂದಾಜು ವರದಿಯನ್ನು ಸಲ್ಲಿಸಲು ಈ ಕೆಳಕಂಡ ಸಮಿತಿಯನ್ನು ರಚಿಸಲಾಗಿದೆ.

| | | |
|---|---|---|
| 1 | ಡಾ|| ವೆಂಕಟೇಶ್, ನಿವೃತ್ತ ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕರು | ಅಧ್ಯಕ್ಷರು |
| 2 | ಶ್ರೀ ಅನಿಲ್,ಸಲಹೆಗಾರರು, PATH ಸಂಸ್ಥೆ, ಬೆಂಗಳೂರು | ಸದಸ್ಯರು |
| 3 | ಡಾ|| ಸೆಲ್ವರಾಜ್,ಉಪ ನಿರ್ದೇಶಕರು (ವೈದ್ಯಕೀಯ),ಆಕುಕ ಸೇವೆಗಳ ನಿರ್ದೇಶನಾಲಯ | ಸದಸ್ಯ ಕಾರ್ಯದರ್ಶಿ |

ರಾಜ್ಯದಲ್ಲಿ ಕೋವಿಡ್-19 ನಿರ್ವಹಣೆಗಾಗಿ ಆಕ್ಸಿಜನ್ ಬೇಡಿಕೆಯ ಅಂದಾಜು ವರದಿಯನ್ನು ಸಲ್ಲಿಸಲು ರಚಿಸಲಾದ ಈ ಸಮಿತಿಯು ಮೂರು ದಿನಗಳೊಳಗಾಗಿ ವರದಿ ಸಲ್ಲಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

06/5/2021
(ಪದ್ಮ.ವಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಆರೋಗ್ಯ 1&2

ಇವರಿಗೆ,

1. ಡಾ||ವೆಂಕಟೇಶ್, ನಿವೃತ್ತ ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕರು.
2. ಶ್ರೀ.ಅನಿಲ್, ಸಲಹೆಗಾರರು, PATH ಸಂಸ್ಥೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಭವನ, ಮಾಗಡಿ ರಸ್ತೆ, ಬೆಂಗಳೂರು
3. ಡಾ||ಸೆಲ್ವರಾಜ್, ಉಪನಿರ್ದೇಶಕರು (ವೈದ್ಯಕೀಯ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಭವನ, ಮಾಗಡಿ ರಸ್ತೆ, ಬೆಂಗಳೂರು

ನಿರ್ದೇಶನಾಲಯದ ಮೂಲಕ

ಮಾಹಿತಿಗಾಗಿ:

1.ಆಯುಕ್ತರು,ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,ಆರೋಗ್ಯ ಭವನ, ಮಾಗಡಿ ರಸ್ತೆ, ಬೆಂಗಳೂರು

2.ಆಯುಕ್ತರು,ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ವಿಶೇಷ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕಾರ್ಪೋರೇಷನ್ ವೃತ್ತ,ಬೆಂಗಳೂರು.

3.ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,ಆರೋಗ್ಯ ಭವನ, ಮಾಗಡಿ ರಸ್ತೆ, ಬೆಂಗಳೂರು

4.ನಿರ್ದೇಶಕರು,(ವೈದ್ಯಕೀಯ ಶಿಕ್ಷಣ) ಆನಂದರಾವ್ ವೃತ್ತ,ಬೆಂಗಳೂರು

5.ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು/ಎಲ್ಲಾ ಜಿಲ್ಲಾ ಶಸ್ತ್ರಚಿಕಿತ್ಸಕರು- ನಿರ್ದೇಶನಾಲಯದ ಮೂಲಕ